# ಪ್ರೀತಿಯ ಬಣ್ಣ ಪಸರಿಸಲಿ

> ವಿಶ್ವಾಸದ ಹಂದರದಲ್ಲಿ ನಳನಳಿಸಬೇಕಾದ ಪ್ರೀತಿಯ ಬಳ್ಳಿ ಸೊರಗಿದೆ. ಬಾಂಧವ್ಯದ ಬೆಸುಗೆ ಹಾಕಬೇಕಾದ ತೋಳು, ಕೈ ಎತ್ತಿ ಕೊಲ್ಲಲು ಹವಣಿಸುತ್ತಿವೆ. ಕುಟುಂಬದ ಒಳಗೂ ಇಂತಹ ಕ್ರೌರ್ಯ ಹೃದಯವನ್ನು ನಿಷ್ಕರುಣೆಯಾಗಿಸಿದೆ.

ಪ್ರೀತಿಯ ಬಣ್ಣ ರಕ್ತದ ಬಣ್ಣಗಳೆರಡೂ ಮಿಳಿತವಾದಂತಿವೆ. ಇತ್ತೀಚಿನ ಪ್ರೇಮಪ್ರಸಂಗಗಳಲ್ಲಿ ಬಹುತೇಕ ಕೊಲೆಯಲ್ಲಿ ಅಂತ್ಯಗೊಳ್ಳುತ್ತಿವೆ. ಮಧುಚಂದ್ರದಲ್ಲಿ ಮೆಲ್ಲುಸಿರಿನ ಮಿಲನದ ಕನಸುಕಂಡವ ಸಂಗಾತಿಯ ಹುನ್ನಾರದಿಂದ ಹತ್ಯೆಯಾದ. ಪ್ರೇಮದಾಕರ್ಷಣೆಯಲ್ಲಿ, ಪಡೆಯುವ ಖುಷಿ ಮತ್ತು ಹುಮ್ಮಸ್ಸಿನಲ್ಲಿ ಜಾತ್ರೆಯ ಹುಡುಗನ ಹಿಂದೆ ಹೋದವಳೂ ಕೊಲೆಯಾದಳು.

ಕ್ರೌರ್ಯಕ್ಕೆ ಯಾವ ಲಿಂಗಭೇದವೂ ಇಲ್ಲ. ತಮ್ಮ ಖುಷಿಗಾಗಿ ಜೀವವೊಂದನ್ನು ನಿಷ್ಕರುಣೆಯಾಗಿ ಕೊನೆಗಾಣಿಸುತ್ತಿದ್ದಾರೆ. ಪ್ರೀತಿಯನ್ನು ದಕ್ಕಿಸಿಕೊಳ್ಳುವ ಹಟ, ಆಕರ್ಷಣೆಯ ಚಟ ಕೊಲೆಗಡುಕರಾಗಿಸುತ್ತಿದೆ. ಕೊಲೆಯೆಂಬುದು ಊಟಕ್ಕೆ ಕರೆದಷ್ಟು, ಸರಸಕ್ಕೆ ಕರೆದಷ್ಟು ಸಲೀಸಾಗುತ್ತಿದೆ. ಸಾಮಾಜಿಕ ಜಾಲತಾಣಗಳ ಪರಿಚಯದಿಂದಲೇ ಸಾವಿನತ್ತ ಸೆಳೆದಂತೆ ಹೊರಟಿರುವುದು ಗಾಬರಿಹುಟ್ಟಿಸುತ್ತದೆ. ಅಪರಿಚಿತರನ್ನು ನಂಬುವ ಅಮಾಯಕತನ, ನಂಬಿದವರನ್ನು ಕೊಲ್ಲುವ ಅಮಾನುಷ ಗುಣ ಎರಡೂ ದಿಗಿಲು ಹುಟ್ಟಿಸುತ್ತವೆ.

ಪ್ರೀತಿಸಿ, ಪರಸ್ಪರ ಕೊಟ್ಟುಕೊಳ್ಳುವ ಸಂಭ್ರಮದಲ್ಲಿರುವವರಲ್ಲಿ ರಕ್ತಪಿಪಾಸು ಗುಣ ರಾರಾಜಿಸುವಂತೆ ಆಗುವ ಉನ್ಮಾದವಾದರೂ ಯಾವುದು? ಒಬ್ಬರೊಂದಿಗೆ ಬದುಕಲಾಗದಿದ್ದರೆ ದೂರವಾಗಲು ಇರುವ ಅಡೆತಡೆಗಳೇನು? ಜೀವನ ಹಂಚಿಕೊಳ್ಳಲಾಗದು ಎಂದು ಘನತೆಯಿಂದ ಬೇರೆಯಾಗುವುದು ಅಸಾಧ್ಯವೇ?

ಇಂಥ ಹಲವಾರು ಪ್ರಶ್ನೆಗಳಿವೆ. ಆದರೆ ಮನುಷ್ಯ ನಿಷ್ಕರುಣಿಯಾಗುತ್ತಿದ್ದಾನೆ. ಅಂತಃಕರಣೆಯಿಲ್ಲದೆ ಪಾಶವೀ ಪ್ರವೃತ್ತಿಯನ್ನು ಮೆರೆಯುತ್ತಿದ್ದಾನೆ. ಮೊಬೈಲ್‌ಫೋನ್‌ಗಳಲ್ಲಿ ಸೆಲ್ಫಿ ಹುಚ್ಚು ಹೆಚ್ಚಾದಂತೆಯೇ ಸ್ವಕೇಂದ್ರಿತ ಬದುಕಿನ ಜಿಜ್ಞಾಸೆ ಹೆಚ್ಚುತ್ತಿದೆ. ಎಲ್ಲದರಲ್ಲಿಯೂ ತಾನು ಕಾಣಬೇಕು, ತಾನೇ ಮೇಲುಗೈ ಸಾಧಿಸಬೇಕು ಎಂಬುದೊಂದು ಹಟ ನಕಾರಾತ್ಮಕವಾಗಿ ಕಾಣುತ್ತಿದೆ. ಇಂಥ ಹಟಗಳ ಪರಿಣಾಮವೇ ಪ್ರೀತಿಯೆಂಬುದು ಭೀತಿಯ ಮಾರ್ಗವಾಗಿ ಬದಲಾಗಿದೆ. ಒಲಿದರೂ, ಒಲ್ಲೆನೆಂದರೂ ಶಿಕ್ಷೆ ಇದ್ದದ್ದೆ.

ಜೀವನ ದುಬಾರಿಯಾಗುತ್ತಿರುವಂತೆಯೇ ಜೀವ ಅಗ್ಗವಾಗುತ್ತ ಸಾಗುತ್ತಿದೆ. ನಮ್ಮ ಮೌಲ್ಯವ್ಯವಸ್ಥೆಯಲ್ಲಿ ಈಗಲೂ ದಾಂಪತ್ಯದಿಂದಾಚೆ ಬರುವ ಬಗ್ಗೆ ಸಕಾರಾತ್ಮಕ ನಿಲುವಿಲ್ಲ. ಬೇಡದ ಬಂಧದಿಂದ ಆಚೆ ಬಂದರೆ ಮಾತಿನ ಕೂರಂಬುಗಳನ್ನು ಎದುರಿಸಬೇಕು. ಕೊಲೆ ಮಾಡಿ, ಕತೆ ಕಟ್ಟಿದರೆ ಅನುಕಂಪ ಗಿಟ್ಟಿಸಬಹುದು ಎಂಬ ದೂ(ದು)ರಾಲೋಚನೆಯೂ ಇರಬಹುದು. ಕೊಲೆ ಮಾಡುತ್ತಿರುವ ಗಂಡುಮಕ್ಕಳಿಗೆ ಅದು ಆ ಕ್ಷಣದ ಪ್ರತಿಕ್ರಿಯೆಯಂತೆ ಕಂಡರೆ, ಹೆಣ್ಣುಮಕ್ಕಳು ಯೋಜಿತವಾಗಿ ತಮ್ಮ ರೋಷವನ್ನು ಹೊರಹಾಕುತ್ತಿದ್ದಾರೆ. ನನಗೆ ದಕ್ಕದವಳು, ಬೇರಾರಿಗೂ ಸಿಗದಿರಲಿ ಎಂಬ ಮನಸ್ಥಿತಿ ಬಹುತೇಕ ಕೊಲೆಗಡುಕರದ್ದಾದರೆ, ಬೇಡದ ಸಂಬಂಧದಿಂದಾಚೆ ಬರಬೇಕು ಎನ್ನುವ ರೋಷ, ಕೊಲೆಯ ಹುನ್ನಾರ ಮಾಡಿದ ಹೆಣ್ಣುಮಕ್ಕಳದ್ದಾಗುತ್ತಿದೆ.

ಈ ಎರಡೂ ನಡಾವಳಿಗಳ ಹಿಂದಣ ಕಾರಣ ಸುಸ್ಪಷ್ಟ. ಪ್ರೀತಿಯ ಭಾಷ್ಯ ಕೊಡುವ ಬದಲು ಪಡೆಯುವ, ಸ್ವಾಮ್ಯ ಸಾಧಿಸುವ ಗುಣವಾಗಿ ಬದಲಾಗಿದೆ. ಇನ್ನೊಬ್ಬರ ಸಾವಿನಲ್ಲಿಯೂ ಪ್ರಾಯಶ್ಚಿತ್ತದ ಬದಲು ಅನುಕಂಪ ಗಳಿಸುವ ಹುನ್ನಾರವಾಗಿದೆ. ಭಾರತೀಯರಲ್ಲಿ ಇಂಥ ಅಪರಾಧಿ ಗುಣ ಬೆಳೆಯಲು ಮೂಲ ಕಾರಣ, ಮಾಡಲು ಕೈತುಂಬ ಕೆಲಸಗಳಿಲ್ಲದೇ ಇರುವುದು, ಮಾತುಮಾತಿಗೆ ಮೆಚ್ಚುಗೆ ಪಡೆಯಲು ತಹತಹಿಸುವುದು. ಅಂಥ ಮೆಚ್ಚುಗೆಗಳ ಮಹಾಪೂರದಲ್ಲಿ ಹರಿದುಹೋಗುವಾಗ ವಿವೇಚನೆಯನ್ನು ಕಳೆದುಕೊಳ್ಳುವುದು. ಸಾಮಾಜಿಕ ಜಾಲತಾಣಗಳಲ್ಲಿ ನಾವೇನು ಎನ್ನುವುದಕ್ಕಿಂತಲೂ ನಾವು ಹೇಗೆ ಕಾಣುತ್ತೇವೆ ಎಂಬುದು ಮೇಲುಗೈ ಸಾಧಿಸುತ್ತದೆ. ಇದೇ ವರ್ತನೆಯೇ ಇಂಥ ಸನ್ನಿವೇಶಗಳಲ್ಲಿಯೂ ಕಾಣುತ್ತಿದೆ. ಬಾಂಧವ್ಯಗಳಲ್ಲಿನ ಬಿರುಕು ಕಂದಕಗಳಾಗುತ್ತಿರುವುದೂ ನಿಷ್ಕರುಣೆಯಾಗಲು ಕಾರಣವಾಗುತ್ತಿದೆ. ಇದೆಲ್ಲ ಇದ್ದರೂ ಸಂಗಾತಿಯನ್ನು ಉಸಿರುಗಟ್ಟಿಸಿ ಸಾಯಿಸುವ, ನಂತರ ಕೊಚ್ಚಿಹಾಕುವ ನಡವಳಿಕೆಗೆ ಯಾವ ಆಯಾಮದಿಂದಲೂ ಸಮರ್ಥನೆಗಳನ್ನು ಕೊಡಲಾಗದು.

ಕುಟುಂಬ ವ್ಯವಸ್ಥೆ ಶಿಥಿಲಗೊಳ್ಳುತ್ತಿದೆ. ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳಲ್ಲಿ ಇಂಥ ಅಸಹನೆ ಮತ್ತು ರೋಷ ಕಾಣುವುದು ಸಹಜ. ಪರಸ್ಪರ ಗೌರವವಿಲ್ಲದೆ ಸ್ವಾಮ್ಯತ್ವ ಸಾಧಿಸುವ, ಹಗೆ ಸಾಧಿಸುವ ಗುಣ ಎದ್ದು ಕಾಣುತ್ತಿದೆ. ಕೊಂದರೆ ಮಾತ್ರ ಗೆಲುವು ಎಂಬ ಮನಸ್ಥಿತಿ ಇತ್ತೀಚಿನ ಗೇಮಿಂಗ್ ಪ್ರವೃತ್ತಿಯಿಂದಲೂ ಬರುತ್ತಿದೆ ಎಂದು ಮನಃಶಾಸ್ತ್ರಜ್ಞರು ಅಭಿಪ್ರಾಯಪಡುತ್ತಿದ್ದಾರೆ. ಇನ್ನೊಂದು ಮುಖ್ಯ ಕಾರಣವೆಂದರೆ ಆರ್ಥಿಕ ಪರಿಸ್ಥಿತಿ, ಅತಿ ಬಡತನದಿಂದ ಹೊರಬರಲು; ಸಿರಿವಂತಿಕೆಯನ್ನು ಗಳಿಸುವ ಸುಲಭ ಬಗೆಗಳಾಗಿಯೂ ಈ ಮಾರ್ಗ ಹುಟ್ಟಿಕೊಳ್ಳುತ್ತಿವೆ. ಅತಿಯಾದ ಲಾಭಕೋರತನ, ಅತಿಯಾದ ದುರಾಸೆಯಿಂದಲೂ ಗಂಡನನ್ನು ಕೊಲ್ಲುವ, ಹೆಂಡತಿಯನ್ನು ಹತ್ಯೆ ಮಾಡುವ ಪ್ರವೃತ್ತಿ ಬೆಳೆಯುತ್ತಿದೆ.

ಅಸೂಯೆ ಮತ್ತು ಒಡೆತನದ ಗುಣಗಳೂ ಇಂಥ ಕೊಲೆಗೆ ಪ್ರೇರಣೆ ನೀಡುತ್ತಿವೆ. ಮನುಷ್ಯ ಇಷ್ಟೆಲ್ಲ ಗೊಂದಲದ ಗೂಡಾಗಿರುವುದು ಏಕೆ? ಒಂದು ನಿರಾಕರಣವನ್ನು ಸಹಿಸದಷ್ಟು, ಒಂದು ಪ್ರೀತಿಯನ್ನು ಬೆಳೆಸದಷ್ಟು! ಪ್ರೀತಿಯ ಬಣ್ಣ ಮೊದಲು ಕೆಂಪಾಗಿತ್ತು. ಈಗ ರಕ್ತದ ಬಣ್ಣವೂ ಎಂಬಂತಾಗಿದೆ. ಸಹಿಷ್ಣು ಮತ್ತು ಅಂತಃಕರಣೆ ಬೆಳೆಸದೇ ಇದ್ದಲ್ಲಿ ಸ್ವೇಚ್ಛೆ ಮತ್ತು ವಾಂಛೆಗಳೆರಡೂ ಈ ಕ್ರೌರ್ಯವನ್ನೇ ಬೆಳೆಸುತ್ತವೆ. ಮಕ್ಕಳಿಗೆ ಪ್ರೀತಿಯನುಣಿಸಿ ಬೆಳೆಸುತ್ತ ವ್ಯಕ್ತಿಗೌರವ ಬರುವಂತೆ ಬೆಳೆಸಬೇಕು. ಅಕ್ಷರಗಳಿಂದ ಅಂಕಗಳಿಕೆಯ ಹುಚ್ಚನ್ನು ಹಚ್ಚಿಸುವಂತೆಯೇ ಪುಸ್ತಕಗಳನ್ನು ಓದುವ ಅಕ್ಷರಪ್ರೀತಿಯನ್ನೂ ಬೆಳೆಸಬೇಕಿದೆ. ಕರುಣೆ, ಮೈತ್ರಿ ಮತ್ತು ಗೌರವ ಮೂಡಿಸುವ ಪ್ರೀತಿಯ ಕೆಂಬಣ್ಣ ಪಸರಿಸಬೇಕಿದೆ. ರಕ್ತ ಹರಿಸುವ ರಕ್ಕಸಪ್ರೀತಿಯಲ್ಲ.

■ ರಶ್ಮಿ ಎಸ್



ಈಶ್ವರ್